OCTOBER 05, 2025

**AKASHAVANI - DHARWAD**

**PRADESH SAMACHARA (KANNADA) 12 PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

‘ಸಹಕಾರ ಸೇ ಸಮೃದ್ಧಿ’ ಧ್ಯೇಯದೊಂದಿಗೆ, ಸಹಕಾರಿ ಸಂಸ್ಥೆಗಳು ದೇಶದ ಆರ್ಥಿಕ ಪ್ರಗತಿಗೆ ಶಕ್ತಿ ತುಂಬುತ್ತಿವೆ. ಮಹಿಳಾ ಸ್ವಾವಲಂಬನೆಗೆ ಆದ್ಯತೆ ನೀಡಿ, ಸ್ವದೇಶಿ ಚಿಂತನೆಗೆ ಹೆಚ್ಚಿನ ಒತ್ತು ನೀಡುತ್ತಿವೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ್ ಜೋಶಿ ಹೇಳಿದರು. ಬೆಳಗಾವಿ, ಕಲ್ಲೋಳಿಯ ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿ ಸಂಘದ, ನೂತನ ಪ್ರಧಾನ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. 2002 ರಲ್ಲಿ ಆರಂಭಗೊಂಡ ಕಲ್ಲೋಳಿ ಸಹಕಾರಿ ಸಂಸ್ಥೆಯು, ಗ್ರಾಮೀಣ ಪ್ರದೇಶದ ಜನರ ಆರ್ಥಿಕ ಸ್ವಾವಲಂಬನೆಗೆ ನೆರವಾಗುತ್ತಿದೆ ಎಂದರು.

<><><>

ಮೈಸೂರು ದಸರಾ ಮಹೋತ್ಸವದ, ಜಂಬೂಸವಾರಿ ಮೆರವಣಿಗೆಯಲ್ಲಿ ಪ್ರದರ್ಶನಗೊಂಡ, ಬೆಳಗಾವಿ ಜಿಲ್ಲೆ ಶ್ರೀ ಮಹಾಕಾಳಿ, ಮಾಯಕ್ಕಾದೇವಿ ದೇವಸ್ಥಾನ, ಚಿಂಚಲಿ ಸ್ತಬ್ಧಚಿತ್ರವು ಮೂರನೇ ಸ್ಥಾನಕ್ಕೆ ಭಾಜನವಾಗಿದೆ. ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ, ‘ನಶಾ ಮುಕ್ತ ಅಭಿಯಾನ’ ವನ್ನು, ಬಿಂಬಿಸಿದ ಸ್ತಬ್ಧಚಿತ್ರವು ಎರಡನೇ ಬಹುಮಾನಕ್ಕೆ ಪಾತ್ರವಾಗಿದೆ.  ‘ಆರೋಗ್ಯಪೂರ್ಣ ಮನಸ್ಸು, ನಶಾಮುಕ್ತ ಕ್ಯಾಂಪಸ್’ ಧ್ಯೇಯದೊಂದಿಗೆ ಪ್ರದರ್ಶನಗೊಂಡ ‘ನಶಾಮುಕ್ತ ಅಭಿಯಾನ’ ಸ್ತಬ್ಧಚಿತ್ರವು ಕೇಂದ್ರ, ರಾಜ್ಯ ಹಾಗೂ ವಿವಿಧ ನಿಗಮಗಳ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದಿರುವುದು, ಸಂತಸ ತಂದಿದೆ ಎಂದು, ವಿಶ್ವವಿದ್ಯಾಲಯದ ಉಪ ಕುಲಪತಿ ಡಾಕ್ಟರ ಭಗವಾನ್. ಬಿ.ಸಿ ಹೇಳಿದ್ದಾರೆ. ಇದು ನಿಷ್ಠೆ ಹಾಗೂ ಸೇವಾ ಭಾವನೆಗೆ ಸಿಕ್ಕ ಗೌರವವಾಗಿದೆ ಎಂದಿದ್ದಾರೆ.

<><><>

ಹಾಸನ ಜಿಲ್ಲೆಯನ್ನು ನಶಾಮುಕ್ತ ಜಿಲ್ಲೆಯನ್ನಾಗಿಸಲು, ತಾಲೂಕು ಮಟ್ಟದಲ್ಲಿ ಕ್ರಿಯಾ ಯೋಜನೆ ರೂಪಿಸುವಂತೆ ತಹಸೀಲ್ದಾರರಿಗೆ ಜಿಲ್ಲಾಧಿಕಾರಿ ಲತಾ ಕುಮಾರಿ ನಿರ್ದೇಶಿಸಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧೀನದಲ್ಲಿ ವ್ಯಸನ ಮುಕ್ತತೆಗೆ ಸಹಕಾರಿಯಾಗುವಂತೆ ಡಿ–ಅಡಿಕ್ಷನ್ ಕೇಂದ್ರಗಳನ್ನು, ಪರವಾನಗಿ ಪಡೆದು ಆರಂಭಿಸುವಂತೆ ಸೂಚಿಸಿದರು.

<><><>

‘ಸ್ವಚ್ಛ ಭಾರತ, ಸ್ವಸ್ಥ ಭಾರತ’ ಧ್ಯೇಯದೊಂದಿಗೆ, ಈ ತಿಂಗಳ 31ರ ವರೆಗೆ, ‘ಫಿಟ್ ಇಂಡಿಯಾ ಸ್ವಚ್ಛತಾ ಫ್ರೀಡಂ ರನ್’ ಆಯೋಜಿತವಾಗಿದೆ. ‘ಸಂಡೇಸ್ ಆನ್ ಬೈಸಿಕಲ್ಸ್’ ಮೂಲಕ, ಸೈಕ್ಲಿಸ್ಟ್‌ಗಳು, ನಗರದಾದ್ಯಂತ ಸಂಚರಿಸಲಿದ್ದಾರೆ.

<><><>

ಬೆಳಗಾವಿಯಲ್ಲಿ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಅಧೀನದಲ್ಲಿ, ರಾಜ್ಯ ಮಟ್ಟದ, ಎರಡು ದಿನಗಳ ಸೈಕ್ಲಿಂಗ್ ಚಾಂಪಿಯನ್‌ಶಿಪ್, ಆಯೋಜಿತವಾಗಿದೆ. ಎರಡನೇ ದಿನದ ರೋಡ್ ಸೈಕ್ಲಿಂಗ್ ಚಾಂಪಿಯನ್ ಶಿಪ್ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಖೇಲೋ ಇಂಡಿಯಾ ಸೈಕ್ಲಿಂಗ್ ತರಬೇತುದಾರರಾದ, ಶ್ರೀಶೈಲ್ ಲಾಯಣ್ಣವರ

<><><>

ಶ್ರೀಶೈಲ್ ಲಾಯಣ್ಣವರ 32 ಸಕೆಂದುಗಳು

<><><>

ಶೈಕ್ಷಣಿಕ ಹಾಗೂ ಸಾಮಾಜಿಕ ಸಮೀಕ್ಷೆ ಮೂಲಕ, ಕಟ್ಟಕಡೆಯ ಅರ್ಹ ವ್ಯಕ್ತಿಗೆ, ಸರ್ಕಾರದ ಯೋಜನೆಗಳ ಫಲ ತಲುಪಿಸುವ ಸದುದ್ದೇಶ ಗಣತಿ ಹೊಂದಿದೆ. ಎಲ್ಲರೂ ಸಮೀಕ್ಷೆಯಲ್ಲಿ ಭಾಗವಹಿಸಿ, ಗಣತಿದಾರರಿಗೆ ಸೂಕ್ತ ಮಾಹಿತಿ ನೀಡುವಂತೆ, ವಿಜ್ಞಾನ ಹಾಗೂ ತಂತ್ರಜ್ಞಾನ ಖಾತೆ ಸಚಿವ, ಎನ್.ಎಸ್.ಬೋಸರಾಜು ಕೋರಿದ್ದಾರೆ. ರಾಯಚೂರಿನ, ನಿಜಲಿಂಗಪ್ಪ ಕಾಲನಿಯ, ತಮ್ಮ ನಿವಾಸದಲ್ಲಿ, ಸಮೀಕ್ಷೆಗಾಗಿ ಸ್ವ ವಿವರ ಸಲ್ಲಿಸಿ, ಮಾತನಾಡಿದರು. ನಾಡಿನ ಜನತೆಯ ವಾಸ್ತವ ಸ್ಥಿತಿಗತಿ ಸಮೀಕ್ಷೆಯಿಂದ ತಿಳಿಯಲಿದೆ. ವರದಿಗೆ ಅನುಗುಣವಾಗಿ, ಸರ್ಕಾರ ಯೋಜಿಸಲಿದೆ. ರಾಜ್ಯಾದ್ಯಂತ ಶೇಕಡ 50ರಷ್ಟು ಸಮೀಕ್ಷೆ ಪೂರ್ಣಗೊಂಡಿದೆ, ಎಂದರು.

<><><>

ಮುಂಗಾರು ಮಳೆಗೆ, ರಾಯಚೂರು ಜಿಲ್ಲೆಯಲ್ಲಿ, ಒಟ್ಟು 7 ಜನ ಮೃತಪಟ್ಟಿದ್ದು, ಆಶ್ರಿತ ಕುಟುಂಬಗಳಿಗೆ, ತಲಾ 5 ಲಕ್ಷ ರೂಪಾಯಿ ಪರಿಹಾರ ಒದಗಿಸಲಾಗಿದೆ ಎಂದು, ರಾಯಚೂರು ಜಿಲ್ಲೆ ಉಸ್ತುವಾರಿ ಸಚಿವ, ಶರಣಪ್ರಕಾಶ ಪಾಟೀಲ, ತಿಳಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸಚಿವರು ಮಾತನಾಡಿ, ಹನ್ನೊಂದು ಸಣ್ಣ ಮತ್ತು ನಾಲ್ಕು ದೊಡ್ಡ ಗಾತ್ರದ ಜಾನುವಾರುಗಳ ಜೀವಹಾನಿ ಸಂಭವಿಸಿದ್ದು, ಮಾಲಿಕರಿಗೆ ಪರಿಹಾರ ನೀಡಲಾಗಿದೆ. ಜಿಲ್ಲಾಧಿಕಾರಿಗಳ ಖಾತೆಯಲ್ಲಿ, 26 ಕೋಟಿ ರೂಪಾಯಿ ಹಣ ಲಭ್ಯವಿದ್ದು, ಆದ್ಯತೆ ಮೇಲೆ, ಪರಿಹಾರ ವಿತರಿಸಲು ಸೂಚಿಸಿದ್ದಾಗಿ, ತಿಳಿಸಿದರು.

<><><>

ಮಂಗಳೂರಿನ ಕುದ್ಮಲ್ ರಂಗರಾಯರು, ಗಾಂಧೀಜಿ ಅವರ ಅಸ್ಪೃಶ್ಯತೆ ನಿವಾರಣೆ ಜನಾಂದೋಲನಕ್ಕೆ ಪ್ರೇರಣೆ ಎಂದು, ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಹೇಳಿದ್ದಾರೆ. ತುಳು ಸಾಹಿತ್ಯ ಅಕಾದೆಮಿ ಪ್ರಕಟಿಸಿದ, ಉದಯಕುಮಾರ ಇರ್ವತ್ತೂರು ಅವರ ಕೃತಿ, 'ಲೋಕಗೆಂದಿನ ಗಾಂಧಿಯೆರ್', ಮಂಗಳೂರಿನಲ್ಲಿ ಬಿಡುಗಡೆ ಮಾಡಿ, ಮಾತನಾಡಿದರು. ತುಳು ಭಾ ೆ, ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರ್ಪಡೆಯಾಗಬೇಕು ಎಂದರು. ತುಳು ಸಾಹಿತ್ಯ ಅಕಾದೆಮಿ ಅಧ್ಯಕ್ಷ ತಾರಾನಾಥ ಗಟ್ಟಿ, ಮಹಾತ್ಮ ಗಾಂಧಿ ವಿಚಾರ ವೇದಿಕೆ ಕಾರ್ಯದರ್ಶಿ, ಎನ್. ಇಸ್ಮಾಯಿಲ್ ಪಾಲ್ಗೊಂಡಿದ್ದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>